ಲಭಿಸಿತು. ಖುಷಿಯನ್ನು ಹಂಚಿಕೊಳ್ಳೋಣವೆಂದು ಮನೆಗೆ ಬಂದೆ. ಸಂಜೆಯಾಗಿತ್ತು. ರಂಜಿತ್ ಸ್ವಲ್ಪ 'ಏರುಹೊತ್ತಿ'ನಲ್ಲಿದ್ದ. ನಾನು ಈ ಸಂತೋಷದ ವಿಷಯವನ್ನು ಹೇಳಲೋ ಬೇಡವೋ ಎನ್ನುವ ಗೊಂದಲದಲ್ಲಿದ್ದೆ. ಆದರೆ, ಹೇಳದೇ ಇರುವುದಕ್ಕೆ ನನ್ನಿಂದಾಗಲಿಲ್ಲ.

''ರಂಜಿತ್, ನನಗೆ ಪಿಎಚ್.ಡಿ. ಸಿಕ್ಕಿತು...''

ಆತನಿಗೆ ಸಂತೋಷವಾದಂತೆ ಕಾಣಲಿಲ್ಲ. ಒಂದು ದಮ್ ಸಿಗರೇಟ್ ಎಳೆಯುತ್ತ, ನನ್ನ ಮುಖದತ್ತ ಹೊಗೆಯುಗುಳುತ್ತ ಹೇಳಿದ, ''ನಿನ್ನ ಗೈಡ್ ತಮಗೆ ತುಂಬಾ ಬೇಕಾದವರಿಗೆ ಬೇಗ ಪಿಎಚ್.ಡಿ. ಕೊಡಿಸುತ್ತಾರಂತೆ...''

ಆತನ ಮಾತಿನ ಒಳಾರ್ಥ ನನ್ನ ಮನಸ್ಸಿಗೆ ಆಘಾತ ನೀಡಿತು. ಯಾಕೋ ಆ ರಾತ್ರಿ ಊಟ ಬೇಕು ಎನ್ನಿಸಲಿಲ್ಲ. ಆದರೆ ಆತ ನನ್ನನ್ನು ಎಳೆದುಕೊಂಡ; ಯಾಕೋ ಏನೋ ಮಹಾಭಾರತದ ಧೃತರಾಷ್ಟ್ರ ನೆನಪಾದ; ಆತ ಒಮ್ಮೆ ಭೀಮನನ್ನು ಅಪ್ಪಿಕೊಳ್ಳಬಯಸಿದ್ದನಂತೆ!

★★★

ಕೆಲವು ವರ್ಷಗಳೇ ಕಳೆದಿದ್ದವು. ಅದೊಂದು ದಿನ ಸುನಯನ ಬೆಳಿಗ್ಗೆಯೇ ನಮ್ಮ ಮನೆಯ ಹತ್ತಿರ ಬಂದಿದ್ದಳು. ಆಕೆಯೊಂದಿಗೆ ಸ್ವಲ್ಪ ಸಲುಗೆಯೂ ಬೆಳೆದಿತ್ತು. ಹತ್ತು ಮಾತಿಗೆ ಒಂದು ಮಾತನ್ನಾಡುತ್ತಿದ್ದವಳು ಈಗ ನಾಲ್ಕು ಮಾತುಗಳನ್ನಾಡುವಂತಾಗಿದ್ದಳು.

''ಏನು ಸುನಯನ, ಏನಾಯ್ತು?''

''ಅಕ್ಕಾ, ಏನಿಲ್ಲ, 50 ರೂಪಾಯಿ ಬೇಕಿತ್ತು. ಬಸ್ಸು ತಪ್ಪಿಹೋಯ್ತು; ಆಟೊದಲ್ಲಿ ಬಂದೆ. ಅವನಿಗೆ ನೀಡಬೇಕಿತ್ತು. ಮನೆಯಿಂದ ತರುವುದಕ್ಕೆ ಮರೆತಿದ್ದೇನೆ.''

''ಅಷ್ಟೇನಾ, ನಾನು ಇನ್ನೇನೋ ಅಂದ್ಕೊಂಡೆ...''

ನಾನು ಪರ್ಸ್ ತೆಗೆದು 500ರ ನೋಟನ್ನು ಆಕೆಗೆ ನೀಡುತ್ತ ಹೇಳಿದೆ, ''ತಗೋ... ಇಟ್ಟುಕೋ...''

ಆಕೆ ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧಳಾಗಲಿಲ್ಲ. ''ನನಗೆ 50 ರೂಪಾಯಿ ಸಾಕು; 500 ಬೇಡ...''

''ಇಟ್ಟುಕೋ ಪರವಾಗಿಲ್ಲ; ನಿನಗೆ ಏನಕ್ಕಾದರೂ ಆಗುತ್ತೆ...''

ಆಕೆ ಸಿಟ್ಟಾದಳು. ''50 ಇದ್ದರೆ ಕೊಡಿ ಅಕ್ಕ, ನನಗೆ ಹೆಚ್ಚಿಗೆ ಬೇಕಾಗಿಲ್ಲ...''

ಕೊನೆಗೂ ಆಕೆ 50 ರೂಪಾಯಿಯನ್ನು ಮಾತ್ರ ತೆಗೆದುಕೊಂಡು ಹೋದಳು. ಒಂದೆರಡು ತಾಸಿನಲ್ಲಿಯೇ ಮತ್ತೆ ಮನೆಗೆ ಬಂದು ಅದನ್ನು ನನಗೆ ಹಿಂದಿರುಗಿಸಿದಳು. ಆಕೆ ಆದಿವಾಸಿ; ಶಾಲೆಗೆ ಹೋಗದವಳು; ಓಡಿ ಬಂದವಳು...

★★★

ರಂಜಿತ್ ಆ ದಿನ ಬಹಳ ಸಂತೋಷದ ಮೂಡ್‌ನಲ್ಲಿದ್ದ. ಭಾನುವಾರವಾದರೂ ಬಹಳ ಬೇಗನೆ ಎದ್ದು ಸ್ನಾನ ಮುಗಿಸಿ, ರೆಡಿಯಾಗಿದ್ದ.

''ಏನ್ ವಿಶೇಷ?'' ಕುತೂಹಲ ತಾಳಲಾರದೇ ಕೇಳಿದೆ.

''ಇವತ್ತು ನನ್ನ ಇಬ್ಬರು ಸ್ನೇಹಿತರು ಬರ್ತಿದ್ದಾರೆ. ಹತ್ತು ಗಂಟೆಗೆಲ್ಲಾ ಬಂದುಬಿಡ್ತಾರೆ. ಏನಾದರೂ ಸ್ಪೆಷಲ್ ಮಾಡು...''

ಆತ ಹೇಳಿದ ಹಾಗೆಯೇ ಹತ್ತು ಗಂಟೆಯ ಹೊತ್ತಿಗೆ ಇಬ್ಬರು ಅಪರಿಚಿತರು ಬಂದರು. ಸಿಹಿ, ಖಾರದ ತಿಂಡಿಗಳು ಹಾಗೂ ಚಹಾ ಸೇವನೆಯ ನಂತರ ಅವರಲ್ಲಿ ಒಬ್ಬ ಎರಡು ಲಕ್ಷ ರೂಪಾಯಿಯನ್ನು ರಂಜಿತ್‌ನ ಮುಂದಿಟ್ಟ. ರಂಜಿತ್ ಒಂದು ಪೆನ್ ಡ್ರೈವನ್ನು ಅವರಿಗೆ ನೀಡಿದ. ಸ್ವಲ್ಪ ಹೊತ್ತಿನ ನಂತರ ಅವರಿಬ್ಬರೂ ಕೈಕುಲುಕಿ ಹೊರಟುಹೋದರು.